# ಮಹಿಪತಿದಾಸರ ಕೃತಿ "ಕೋಲು ಕೋಲೆನ್ನ ಕೋಲೆ"

ಕೋಲು ಕೋಲೆನ್ನ ಕೋಲೆ ।
ಕೋಲು ಕೋಲೆನ್ನ ಕೋಲೆ ।
ಕೋಲುಶ್ರೀ ಗುರುವಿನ ಬಲಗೊಂಬೆ ಕೋಲೆ ॥

ಶಿಕ್ಷಿಸಿ ನಿಗಮಚೋರ ರಾಕ್ಷಸರಾ ಕೊಂದು
ರಕ್ಷಿಸಿ ವೇದವನುಳಿಹಿದ ಕೋಲೆ ।
ರಕ್ಷಿಸಿ ವೇದವನುಳುಹಿದ ಕ್ಷಿತಿಯೊಳು
ಮತ್ಸ್ಯಾವತಾರನ ಬಲಗೊಂಬೆ ಕೋಲೆ ॥೧॥

ಧರ್ಮ ನಡೆಯಲಾಗಿ ಮರ್ಮವಾ ತಾಳಿದ
ಕರ್ಮಹಾರ ಶ್ರೀಮೂರ್ತಿಯ ಕೋಲೆ ।
ಕರ್ಮಹಾರಶ್ರೀ ಮೂರ್ತಿಯ ಧರೆಯ ಹೊತ್ತ
ಕೂರ್ಮಾವತಾರನ ಬಲಗೊಂಬೆ ಕೋಲೆ ॥೨॥

ಧರೆಯ ಕದ್ದಸುರನ ಕೋಲೆದಾಡೆಂದ ಸೀಳಿ
ಹೋರಿ ಹೊಯ್ದಾಡಿದ ನರಹರಿ ಕೋಲೆ ।
ಹೋರಿ ಹೊಯ್ದಾಡಿದ ನರಹರಿ ಧರೆಯಗೆದ್ದ
ವರಹಾವತಾರನ ಬಲಗೊಂಬೆ ಕೋಲೆ ॥೩॥

ತರುಳ ಪ್ರಹ್ಲಾದನಾಗಿ ಧುರುಳ ಧೈತ್ಯರ ಕೊಂದು
ಕರುಳನ ಮಾಲೆಯ ಧರಿಸಿದ ಕೋಲೆ ।
ಕರುಳನ ಮಾಲೆಯ ಧರಿಸಿದ ಹರಿ
ನರಸಿಂಹಾವತಾರನ ಬಲಗೊಂಬೆ ಕೋಲೆ ॥೪॥

ನೇಮಿಸಿ ಮೂರುಪಾದ ಭೂಮಿಯ ಬೇಡಿದ
ಹೆಮ್ಮೆಯಂ ಪರಿಹರಿಸಿದ ಕೋಲೆ ।
ಹೆಮ್ಮೆಯ ಪರಿಹರಿಸಿದ ಬ್ರಾಹ್ಮಣನಾಗಿ
ವಾಮನಾವತಾರನ ಬಲಗೊಂಬೆ ಕೋಲೆ ॥೫॥

ಆಜ್ಞೆಯ ಮೀರದೆ ಅತ್ರಜಳಾ ಶಿರವ
ಶೀಘ್ರದಿಂದಲಿ ಇಳುಹಿದ ಕೋಲೆ ।
ಶೀಘ್ರದಿಂದಲಿ ಇಳುಹಿದ ಶಿರವನ್ನು
ಭಾರ್ಗವರಾಮನ ಬಲಗೊಂಬೆ ಕೋಲೆ ॥೬॥

ಕಾಮದಿಂದೊಯ್ದ ಸೀತೆಯ ತಾಮಸದನವಾ
ಕೊಂದ ನೇಮವ ಸ್ಥಾಪಿಸಿದ ಇಳೆಯೊಳು ಕೋಲೆ ।
ನೇಮವ ಸ್ಥಾಪಿಸಿದ ಇಳೆಯೊಳು ಶ್ಯಾಮವರ್ಣ
ರಾಮನವತಾರನ ಬಲಗೊಂಬೆ ಕೋಲೆ ॥೬॥

ದುಷ್ಟ ದೈತ್ಯರನ್ನೆಲ್ಲ ಕುಟ್ಟಿ ಮಡು
ನೆಟ್ಟಾನೆ ಗಿರಿಯಾನೆತ್ತಿದಾ ಕೋಲೆ ।
ನೆಟ್ಟಾನೆ ಗಿರಿಯಾನೆತ್ತಿದ ಬೆಟ್ಟಲ್ಲಿ
ಕೃಷ್ಣಾವತಾರನ ಬಲಗೊಂಬೆ ಕೋಲೆ ॥೭॥

ಕದ್ದು ತ್ರಿಪುರನ ಕೊಂದು ಇದ್ದಸತಿಯರ ವ್ರತವ
ಸಿದ್ಧಿಯ ತಾನು ಅಳಿದನು ಕೋಲೆ।
ಸಿದ್ಧಿಯ ತಾನು ಅಳಿದನು ಬುದ್ಧಿಯಲಿ
ಬೌದ್ಧಾವತಾರನ ಬಲಗೊಂಬೆ ಕೋಲೆ ॥೮॥

ಮಲ್ಲಮಾನ್ಯರನೆಲ್ಲ ಹಲ್ಲಾ ಮುರಿಯಲಾಗಿ
ನಲ್ಲ ತೇಜಿಯನೇರಿದ ಕೋಲೆ ।
ನಲ್ಲ ತೇಜಿಯನೇರಿ ದಾರ್ಬಹ್ಯನಾಗಿ
ಕಲ್ಕ್ಯಾವತಾರನ ಬಲಗೊಂಬೆ ಕೋಲೆ ॥೯॥

ವಸ್ತುಪರಾತಪರರ ವಿಸ್ತಾರ ದೂರಲಾಗಿ
ಹತ್ತಾವತಾರ ಧರಿಸಿದ ಕೋಲೆ ।
ಹತ್ತಾವತಾರ ಧರಿಸಿದ ಮಹಿಪತಿ
ಅಂತರಾತ್ಮನ ಬಲಗೊಂಬೆ ಕೋಲೆ ॥೧೦॥